ಆ) ಕಾರ್ಖಾನೆಯು ಉಳಿಸಿಕೊಂಡಿರುವ ಸಾಲ ಮತ್ತು ಠೇವಣಿಯ ವಿವರ ಈ ಕೆಳಕಂಡಂತಿದೆ.

I ಸಾಲಗಳು

ಅ) ಅವಧಿ ಸಾಲ	(ರೂ. ಲಕ್ಷಗಳಲ್ಲಿ)
1. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ (ನಿ), ಬೆಂಗಳೂರು	94.15
ಆ) ಸಕ್ಕರೆ ಅಡವು ಸಾಲ	
1. ದ.ಕ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ನಿ). ಮಂಗಳೂರು.	261.40
2. ಕೋಟೆ ಸಿ.ಎ. ಬ್ಯಾಂಕ್, ಕೋಟೆ	162.67
3. ಕಿನ್ನಿಗೋಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್	82.42
4. ಬಜಪೆ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್	82.50
ಒಟ್ಟು	**683.14**

II ಠೇವಣಿಗಳು

	1. ಸಹಕಾರ ಸಂಘಗಳಿಂದ ನಿಖರ ಠೇವಣಿ	2. ವ್ಯಕ್ತಿ ಸದಸ್ಯರುಗಳಿಂದ ನಿಖರ ಠೇವಣಿ	ಒಟ್ಟು
	ರೂ. ಲಕ್ಷಗಳಲ್ಲಿ		
ಅಸಲು	457.80	4.14	461.94
ಬಡ್ಡಿ (30.6.03)	138.57	3.13	141.70
ಒಟ್ಟು	596.37	7.27	603.64

ರೂ. 603.64 ಲಕ್ಷಗಳು

ಇ) ಬಾಕಿ ಇರುವ ಸಾಲ ಮತ್ತು ಠೇವಣಿಯನ್ನು ನಿಗದಿತ ಅವಧಿಯೊಳಗೆ ಮರುಪಾವತಿ ಮಾಡಲು ಕಾರ್ಖಾನೆಯು ಕ್ರಮವಿಡಬೇಕಾಗಿರುತ್ತದೆ.

ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿನ ಪ್ರಶಸ್ತಿ

3190 (3684) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ, ನೀಡಲಾಗುತ್ತಿರುವ ಪ್ರಶಸ್ತಿಗಳ ವಿವರಗಳೇನು;

ಆ) 1999–2000 ನಂತರ ಇದುವರೆಗೆ ಎಷ್ಟು ಜನರಿಗೆ ಹಾಗೂ ಸಂಘಸಂಸ್ಥೆಗಳಿಗೆ ಪ್ರಶಸ್ತಿ ನೀಡಲಾಗಿದೆ ವಿವರ ನೀಡುವುದು;

ಇ) ಈ ಪ್ರಶಸ್ತಿಗಳೊಂದಿಗೆ ನೀಡಲಾಗುವ ನಗದು ಬಹುಮಾನದ ಮೊತ್ತವೆಷ್ಟು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

1. ಕೃಷಿ ಪ್ರಶಸ್ತಿ :–

ಆಯ್ದ ಬೆಳೆಗಳಲ್ಲಿ ರಾಜ್ಯ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸ್ಪರ್ಧೆ ಏರ್ಪಡಿಸಿ ಅಧಿಕ ಇಳುವರಿ ಪಡೆದ ಮೊದಲ 3 ಸ್ಥಾನದ ರೈತರಿಗೆ ಪ್ರಶಸ್ತಿ ನೀಡಲಾಗುತ್ತಿದೆ.

2. ಕೃಷಿ ಪಂಡಿತ ಪ್ರಶಸ್ತಿ :–

ಕೃಷಿ ಕ್ಷೇತ್ರದಲ್ಲಿ ಅನ್ವೇಷಣೆ ಮಾಡುತ್ತಿರುವ ಕೃಷಿ ಪರಿಣಿತರಿಗೆ ಕೃಷಿ ಪಂಡಿತ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಪ್ರಶಸ್ತಿ ಸಂಖ್ಯೆ ವಿವರ

ಪ್ರಶಸ್ತಿ ವಿವರ		ಪ್ರಶಸ್ತಿ ನೀಡಿದ ರೈತರ ಸಂಖ್ಯೆ			
		99–2000:	2000–01	2001–02	ಒಟ್ಟು
ಅ)	ಕೃಷಿ ಪ್ರಶಸ್ತಿ	539	558	531	1628
ಆ)	ಕೃಷಿ ಪಂಡಿತ ಪ್ರಶಸ್ತಿ	–	–	06	06

ಸಂಘ ಸಂಸ್ಥೆಗಳಿಗೆ ಪ್ರಶಸ್ತಿಯನ್ನು ನೀಡುವ ಕಾರ್ಯಕ್ರಮ ಇರುವುದಿಲ್ಲ.

ಇ) ಕೃಷಿ ಪ್ರಶಸ್ತಿಯಡಿಯಲ್ಲಿ ನೀಡುವ ನಗದು ಬಹುಮಾನದ ಮೊತ್ತ (ರೂ.ಗಳಲ್ಲಿ)

ಸ್ಪರ್ಧಾ ಹಂತ	ಬೆಳೆ ಸಂಖ್ಯೆ	ಬಹುಮಾನದ ಮೊತ್ತದ ವಿವರ	ಪ್ರಥಮ	ದ್ವಿತೀಯ	ತೃತೀಯ
ಅ)	ರಾಜ್ಯ ಮಟ್ಟ	11	30000	15000	10000
ಆ)	ಜಿಲ್ಲಾ ಮಟ್ಟ (ಪ್ರತಿ ಜಿಲ್ಲೆಗೆ	1	15000	10000	5000
ಇ)	ತಾಲ್ಲೂಕು ಮಟ್ಟ (ಪ್ರತಿ ತಾಲ್ಲೂಕಿಗೆ	1	10000	5000	3000

2. ಕೃಷಿ ಪಂಡಿತ ಪ್ರಶಸ್ತಿಯ ನಗದು ಬಹುಮಾನ ಮೊತ್ತದ ವಿವರ :

ಬಹುಮಾನಿತ ಸ್ಥಾನ	ಬಹುಮಾನ ಸಂಖ್ಯೆ	ಬಹುಮಾನ ಮೊತ್ತ (ರೂ.ಗಳಲ್ಲಿ)	ಒಟ್ಟು
ಅ) ಪ್ರಥಮ	01	2,00,000	2,00,000

1	2	3	4
ಅ) ಪ್ರಥಮ	01	2,00,000	2,00,000
ಆ) ದ್ವಿತೀಯ	02	1,00,000	2,00,000
ಇ) ತೃತ್ತೀಯ	03	50,000	1,50,000
ಈ) ಚತುರ್ಥ	04	25,000	1,00,000
ಒಟ್ಟು	**10**	–	**6,50,000**

ಸಹಕಾರ ಸಂಘ ಸಂಸ್ಥೆಗಳು ಮತ್ತು ಸಹಕಾರಿ ಬ್ಯಾಂಕುಗಳ ಆಡಳಿತ ಮಂಡಳಿಗೆ ನಾಮ ನಿರ್ದೇಶನ ಮಾಡುವ ಬಗ್ಗೆ

3191 (3725) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಾಥಮಿಕ ಸಹಕಾರಿ ಸಂಘ ಸಂಸ್ಥೆಗಳು ಮತ್ತು ಸಹಕಾರಿ ಬ್ಯಾಂಕುಗಳ ಆಸ್ತಿ ಜವಾಬ್ದಾರಿ ತಃಖ್ತೆಗಳ ಪ್ರಕಾರ ಸರ್ಕಾರದಿಂದ ಯಾವುದೇ ರೀತಿಯ ನೆರವು ಇಲ್ಲದಿದ್ದಲ್ಲಿ, ಅಂತಹ ಸಹಕಾರಿ ಸಂಸ್ಥೆಗಳ ಮತ್ತು ಬ್ಯಾಂಕುಗಳ ಆಡಳಿತ ಮಂಡಳಿಗೆ ಸರ್ಕಾರವು ನಾಮನಿರ್ದೇಶನ ಸದಸ್ಯರನ್ನು ನೇಮಕ ಮಾಡುವ ಅಧಿಕಾರ ಇದೆಯೇ?

ಆ) ಅಂತಹ ಸಹಕಾರಿ ಸಂಘಗಳಿಗೆ ಮತ್ತು ಸಹಕಾರಿ ಬ್ಯಾಂಕುಗಳಿಗೆ ಸರ್ಕಾರ ನಾಮನಿರ್ದೇಶನ ಮಾಡಿರುವುದಿಲ್ಲವೇ? ವಿವರ ನೀಡುವುದು.

ಇ) ಈ ರೀತಿ ನೇಮಕ ಮಾಡಿರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್. ವಿಶ್ವನಾಥ (ಸಹಕಾರ ಸಚಿವರು)

ಅ) ಇಲ್ಲ.

ಆ) ಇಲ್ಲ

ಇ) ಅನ್ವಯಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಅಡುಗೆ ಅನಿಲ ಬಳಕೆದಾರರಿಗೆ ಸೀಮೆ ಎಣ್ಣೆ ವಿತರಿಸುವುದು

3193 (3985) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಅಡುಗೆ ಅನಿಲ ಹೊಂದಿರುವ ಕುಟುಂಬಗಳ ಸಂಖ್ಯೆ ಎಷ್ಟು?

ಆ) ಅಡುಗೆ ಅನಿಲ ಹೊಂದಿರುವವರಿಗೆ ಪಡಿತರ ಚೀಟಿಯಲ್ಲಿ ಸೀಮೆ ಎಣ್ಣೆಯನ್ನು ನೀಡಲಾಗುತ್ತಿದೆಯೇ;

ಇ) ಇಲ್ಲದಿದ್ದಲ್ಲಿ, ಕಾರಣಗಳೇನು;

ಈ) ಅಡುಗೆ ಅನಿಲದ ಸರಬರಾಜು ಸರಿಯಾಗಿಲ್ಲದೇ ಇರುವುದರಿಂದ ಅಡಿಗೆ ಅನಿಲ ಹೊಂದಿರುವ ಪಡಿತರ ಚೀಟಿದಾರರಿಗೂ ಸೀಮೆಎಣ್ಣೆ ವಿತರಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಬೆಂಗಳೂರು ನಗರ ಪ್ರದೇಶದಲ್ಲಿ 10,44,719 ಅಡಿಗೆ ಅನಿಲ ಸಂಪರ್ಕಗಳನ್ನು ತೈಲ ಕಂಪನಿಗಳಿಂದ ನೀಡಲಾಗಿದೆ.